ಇತ್ಯಾದಿಗಳು ಲಭ್ಯವಿದ್ದು, ಮಾರ್ಚ್ 93ರ ಅಂತ್ಯದ ವೇಳೆಗೆ ಸದರಿ ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಈ ಉಪ ವಿದ್ಯುತ್ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ವಿಟ್ಲ ಮತ್ತು ಅದರ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯು ಸಾಕಷ್ಟು ಪ್ರಮಾಣದಲ್ಲಿ ಸುಧಾರಣೆಗೊಳ್ಳುವುದು.

Sanction of Industrial Estate at Nipani

SRI SUBASH JOSHI:- Nipani is a border and an industrial town, but since the Government was not enstablished any industrial estate in Nipani town, people are facing difficulties. I request the Industries Minister to sanction industrial estate for Nipani town.

SRI BLASIUS M. DISOUZA (MINISTER FOR LABOUR) (On behalf of the Chief Minister):- I would like to make the following statement:

> "The Karnataka State Small Industries Development Corporation has acquired 3.2 acres of land at Nipani for establishing industrial estate. Recently a government notification has been issued inviting applications for the same. Considering the response to this notification, a programme for establishment of sheds and set up the industrial estate will be taken up."

ಗುಲ್ಬರ್ಗ ಜಿಲ್ಲೆಯಲ್ಲಿ ಅಬಕಾರಿ ಗಾರ್ಡ್‌ಗಳ ನೇಮಕಾತಿಯಲ್ಲಿ ಅವ್ಯವಹಾರ.

ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):- ಮಾನ್ಯ ಉಪಾಧ್ಯಕ್ಷರೇ, ಗುಲಬರ್ಗಾ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಲ್ಲಿ ಅಬಕಾರಿ ಗಾರ್ಡ್ ನೇಮಕಾತಿಯಲ್ಲಿ ಅವ್ಯವಹಾರ ಹಾಗೂ ಸುಳ್ಳುಜಾತಿ ಪ್ರಮಾಣ ಪತ್ರವನ್ನು ಅಧಿಕಾರಿಗಳೇ ಸೃಷ್ಟಿಸಿ ಅವರವರ ಅಭ್ಯರ್ಥಿಗಳನ್ನು ನೇಮಿಸಿಕೊಂಡಿದ್ದು ಹಾಗೂ ಅಭ್ಯರ್ಥಿಗಳಿಂದ ದುಡ್ಡು ಪಡೆದಿದ್ದು ಸಾರ್ವಜನಿಕರಿಂದ ತಿಳಿದುಬಂದಿದೆ. ಹಾಗೂ ಅರ್ಹ ಅಭ್ಯರ್ಥಿಗಳನ್ನು ಕಡೆಗಣಿಸಿದ್ದಾರೆ. ಆಯ್ಕೆಯ ಪಟ್ಟಿಯನ್ನು ದಿನಾಂಕ 8.1.1993ರಂದು ಪ್ರಕಟಿಸಲಾಗಿದೆಯೆಂದು ತಿಳಿದುಬಂದಿದೆ. ಆದ್ದರಿಂದ ಈ ಪಟ್ಟಿಯನ್ನು ರದ್ದುಪಡಿಸಿ, ಅಧಿಕಾರಿಗಳ ಮೇಲೆ ವಿಚಾರಣೆ ಮಾಡಿ, ಪುನಃ ಹೊಸದಾಗಿ ಆಯ್ಕೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಮಂತ್ರಿ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಓದುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಅಬಕಾರಿ ರಕ್ಷಕರ ನೇಮಕಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಜಿಲ್ಲೆಯ ಅಬಕಾರಿ ರಕ್ಷಕರ ಹುದ್ದೆಗಳಿಗೆ ತಮ್ಮ ಆದೇಶ ಸಂಖ್ಯೆ:ಎಡಿಎಂ.ಇಎಸ್‌ಟಿ:130:90-91 ದಿನಾಂಕ 8-1-93ರ ಮೂಲಕ 50 ಜನ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಪಡಿಸಿರುತ್ತಾರೆ. ಈ ಪಟ್ಟಿಯೊಡನೆ 5 ಜನ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ಸಹ ಪ್ರಕಟಿಸಿರುತ್ತಾರೆ. ಈ ರೀತಿಯ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ಮೊದಲು, ನೇಮಕಾತಿ ಸಮಿತಿಯ ಅಧ್ಯಕ್ಷರು ಮತ್ತು ಅಬಕಾರಿ ಜಿಲ್ಲಾಧಿಕಾರಿಗಳು ಗುಲ್ಬರ್ಗಾ ಇವರು ಈ ಕೆಳಕಾಣಿಸಿದ ಸಮಿತಿಯ ಸದಸ್ಯರ ನೆರವಿನೊಂದಿಗೆ ಇದೇ ತಿಂಗಳ ಅಂದರೆ ಜನವರಿ 1993ರ 4, 5 ಮತ್ತು 6ನೇ ದಿನಾಂಕಗಳಂದು ಅಭ್ಯರ್ಥಿಗಳ ಸಂದರ್ಶನ ನಡೆಸಿರುತ್ತಾರೆ.

1) ಶ್ರೀ ಕೆ.ಎಲ್. ತಿವಾರಿ, ಸದಸ್ಯ ಕಾರ್ಯದರ್ಶಿ
ಅಬಕಾರಿ ಅಧೀಕ್ಷಕರು, ಗುಲ್ಬರ್ಗಾ

2) ಶ್ರೀ ಕೃಷ್ಣಪ್ಪನಾಯಕ ಸದಸ್ಯರು
ಅಬಕಾರಿ ಉಪ ಆಯುಕ್ತರು,
(ಜಾರಿ ಮತ್ತು ತನಿಖೆ), ಗುಲ್ಬರ್ಗಾ

3) ಶ್ರೀ ಕಾಂತಪ್ಪ ಸದಸ್ಯರು
ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಕಛೇರಿ,
ಗುಲ್ಬರ್ಗಾ.

4) ಶ್ರೀ ಪ್ರೆಸ್ಸಾ ಸದಸ್ಯರು
ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತ ಕಛೇರಿ, ಗುಲ್ಬರ್ಗಾ.

ಈ ರೀತಿ ಆಯ್ಕೆಯಾದ 50 ಜನ ಅಭ್ಯರ್ಥಿಗಳ ಮತ್ತು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾದ 5 ಜನ ಅಭ್ಯರ್ಥಿಗಳ ವರ್ಗೀಕರಣ ಕೆಳಕಾಣಿಸಿದಂತೆ ಇರುತ್ತದೆ.

ವರ್ಗ	ಮೊದಲ ಪಟ್ಟಿಯಲ್ಲಿ ಆಯ್ಕೆಯಾದವರ ಸಂಖ್ಯೆ	ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾದವರ ಸಂಖ್ಯೆ
ಪರಿಶಿಷ್ಟ ಜಾತಿ	12	1
ಪರಿಶಿಷ್ಟ ಪಂಗಡ	4	1
'ಎ' ವರ್ಗ	2	1
'ಬಿ' ವರ್ಗ	5	1
'ಸಿ' ವರ್ಗ	5	–
'ಡಿ' ವರ್ಗ	4	–
'ಇ' ವರ್ಗ	2	–
ಸಾಮಾನ್ಯ ಅರ್ಹತೆ	12	1
ಮಾಜಿ ಸೈನಿಕರು	4	–
ಒಟ್ಟು	50	5

ಜಾರಿ ಮತ್ತು ತನಿಖಾ ವಿಭಾಗದ ಅಬಕಾರಿ ಜಿಲ್ಲಾಧಿಕಾರಿ, ಗುಲ್ಬರ್ಗಾ ಇವರು ಈ ನಿಟ್ಟಿನಲ್ಲಿ ಮಾನ್ಯ ಶಾಸಕರುಗಳು ಮಾಡಿದ ಆರೋಪಗಳು ಸರಿಯಾದವುಗಳು ಅಲ್ಲ ಎಂದು ತಿಳಿಸಿರುತ್ತಾರೆ. ಆದಾಗ್ಯೂ, ಈ ಬಗ್ಗೆ ವಿವರವಾದ ತನಿಖೆಯನ್ನು ಮಾಡಿ ಸತ್ಯ ಶೋಧನೆಯನ್ನು ಮಾಡಲಾಗುವುದು.

(6) ಹಾಸನದಲ್ಲಿ ಸಾರಿಗೆ ಸಂಸ್ಥೆಯ ಚಾಲಕ ತರಬೇತಿ ಕೇಂದ್ರದ ಕಟ್ಟಡ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):- ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹಾಸನದಲ್ಲಿ ಚಾಲಕ ತರಬೇತಿ ಕೇಂದ್ರವನ್ನು ತೆರೆಯಲು ಉದ್ದೇಶಿಸಿದ್ದು, ಅದಕ್ಕೆ ಸಂಬಂಧಿಸಿದ ಚಾಲಕ ತರಬೇತಿ ಕೇಂದ್ರದ ಕಟ್ಟಡವನ್ನು ಕಟ್ಟುವ ಕಾರ್ಯದ